ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Wednesday, the 8th July 1981, Ashada , 17, 1903. S.E.

The House met in the Assembly Chamber, Vidhana Soudha at Twelve of the Clock.

[MR. SPEAKER (Sri K. H. RANGANATH) in the Chair]

Statement by the Chief Minister

reg. Death of Several Persons due to Consumption of Illicit Liqour.

ಅಧ್ಯಕ್ಷರು.—ಈ ದಿವಸ ಪ್ರಶ್ನೋತ್ತರ ವೇಳೆ ಇಲ್ಲ ಮಾನ್ಯ ಮುಖ್ಯ ಮಂತ್ರಿಗಳವರು ಒಂದು ಹೇಳಿಕೆಯನ್ನು ಕೊಡುವವರಿದ್ದಾರೆ.

ಶ್ರೀ ಆರ್. ಗುಂಡೂರಾವ್ —ಮಾನ್ಯ ಅಧ್ಯಕ್ಷರೇ, ನಿನ್ನೆ, ಮೊನ್ನೆ ರಾತ್ರಿ ಬೆಂಗಳೂರಿನಲ್ಲಿ ನಡೆದಂಥ ಒಂದು ದುರಂತವೇನಿದೆ ಅದರ ಬಗ್ಗೆ ನಿನ್ನೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದೆ. ನಿನ್ನೆ ಸ್ಟೇಟ್‌ಮೆಂಟ್ ಮಾಡಿದಾಗ ಸುಮಾರು ೫೧ ಜನ ಸತ್ತು ಹೋಗಿದ್ದರು, ಆ ರೀತಿ ಸತ್ತು ಹೋದಂಥ ಪರೆಲ್ಲರಿಗೂ, ಅವರ ಶವಸಂಸ್ಕಾರ ಮತ್ತಿತರ ಖರ್ಚುಗಳಿಗೋಸ್ಕರವಾಗಿ ಒಂದು ಸಾವಿರ ರೂಪಾಯಿ ಗಳನ್ನು ಸರ್ಕಾರದ ವತಿಯಿಂದ ಕೊಟ್ಟಿದ್ದೇವೆಂದು ಹೇಳಿದೆ. ಆದರೆ ಇವತ್ತಿಗೆ ಇಲ್ಲಿಯವರೆಗೆ ಸುಮಾರು ೧೯೫ ಜನ ತೀರಿ ಹೋಗಿದ್ದಾರೆ, ಬಹುಶಃ ಇನ್ನು ಇಷ್ಟು ಹೊತ್ತಿಗೆ ಎಷ್ಟು ಜನ ತೀರಿ ಹೋಗಿದ್ದಾರೆ ಎಂಬುದನ್ನು ಳೆಯುವುದಕ್ಕೆ ಬರುವುದಿಲ್ಲ. ಏತಕ್ಕೆಂದರೆ ಕುಡಿದಂಥವರು ಮತ್ತೆ ಮತ್ತೆ ಆಸ್ಪತ್ರೆಗೆ ಬರುತ್ತಿದ್ದಾರೆ, ಬೇರೆ ಬೇರೆ ಕಡೆಗಳಿಂದಲೂ ಬರುತ್ತಿದ್ದಾರೆ, ೫ ನಿಮಿಷಕ್ಕೂಮ್ಮೆ ಒಬ್ಬರು ಸಾಯುತ್ತಿ ದ್ದಾರೆ. ಇದರ ಬಗ್ಗೆ ಪೂರ್ತಿ ವಿಚಾರಣೆ ಆಗಬೇಕಾಗಿದೆ. ಬಹುಶಃ ಈ ರೀತಿಯಾಗಿ ಕಳ್ಳಬಟ್ಟಿಯನ್ನು ಕಂಡಿದು ತೀರಿದ್ದು ಬಹುಶಃ ನಮ್ಮದೇಶದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಗಿರಲಿಲ್ಲ. ಮದ್ರಾಸ್‌ನಲ್ಲಿ ಆದಾಗ ೧೫೦ ಜನ ತೀರಿ ಹೋಗಿದ್ದರು ಆನಂತರ ಡೆಲ್ಲಿಯಲ್ಲಿ ಸಹ ಆದಾಗಲೂ ಆಗಲೂ ಸಹ ೧೨೫, ೧೩೦ ಜನ ಸತ್ತು ಹೋಗಿದ್ದರು. ಆದರೆ ನಮ್ಮಲ್ಲಿ ಆಗಿರತಕ್ಕಂಥದ್ದು ವಿಪರೀತವಾಗಿ, ಜಾಸ್ತಿಯಾ ದೆ, ಅವರೆಲ್ಲ ಬಡವರೇ ಆಗಿದ್ದಾರೆ ಆಡರಲ್ಲೂ ಕೂಲಿ ಕೆಲಸ ಮಾಡುವವರೇ ತೀರಿ ಹೋಗಿ ದ್ದಾರೆ. ಕೆಲವರ ಮನೆಯಲ್ಲಿ ಮಕ್ಕಳನ್ನು ಬಿಟ್ಟು ತಂದೆತಾಯಿಗಳಿಬ್ಬರೂ ತೀರಿ ಹೋಗಿದ್ದಾರೆ. ಆ ಮಕ್ಕಳಿಗೆ ನಾವು ಯಾವುದೇ ತರಹದ ಸಹಾಯವನ್ನು ಮಾಡಬೇಕಾಗಿದೆ, ಮತ್ತೆ ಅವರಲ್ಲಿ ಕೆಲವು ಚಿಕ್ಕ ಮಕ್ಕಳು ಕೂಲಿ ಕೆಲಸ ಮಾಡತಕ್ಕವರು ಇದ್ದಾರೆ, ಅಂತೂ ಇದೊಂದು ಹೃದಯ ವಿದ್ರಾವಕವಾದಂಥ ಘಟನೆ ನಡೆದು ಹೋಗಿದೆ. ಎಲ್ಲರೂ ಸಹ ಅವರ ವಿಚಾರದಲ್ಲಿ ಬಹಳ ದುಃಖವನ್ನು ವ್ಯಕ್ತ ಮಾಡಿ ತಮ್ಮ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಸರ್ಕಾರ ಸಹ ಅವರ ಬಗ್ಗೆ ವಿಶೇಷವಾದ ಸಹಾಯಕ್ಕಾಗಿ ಎಲ್ಲಾ ಏರ್ಪಾಡನ್ನೂ ಮಾಡಬೇಕೆಂದು ಈಗಾಗಲೇ ತೀರ್ಮಾನ ಮಾಡಲಾಗಿದೆ. ಈಗ ನಿರ್ಗತಿಕರು ಆಗಿರತಕ್ಕಂಥ ಮಕ್ಕಳಿಗೆ ಇರಲಿಕ್ಕೆ ಮತ್ತು ಅವರನ್ನು ಜವಾಬ್ಬರಿಯಿಂದ ನೋಡಿಕೊಳ್ಳುವು ದಕ್ಕೆ ನಾವು ವ್ಯವಸ್ಥೆಯನ್ನು ಕಾರ್ಪೊರೇಷನ್ ಮೂಲಕವೇ ಆಗಲೀ ಅಥವಾ ಸಮಾಜ ಕಲ್ಯಾಣ ಇಲಾಖೆಯ ಮೂಲಕವೇ ಆಗಲೀ ಯಾವುದೇ ಒಂದು ವ್ಯವಸ್ಥೆಯ ಮೂಲಕವಾಗಿ ಆಗಲೀ ಅವರಿಗೆ ತಾತ್ಕಾಲಿಕವಾಗಿ ಸಹಾಯವನ್ನು ನೀಡಿ ಅವರ ಈ ಒಂದು ವ್ಯಸನ, ಏನೊಂದು ದುಃಖವಿದೆ ಅದನ್ನು ನಿವಾರಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಮತ್ತೆ ಆಸ್ಪತ್ರೆಗಳಲ್ಲಿರತಕ್ಕ ಎಲ್ಲಾ ಡಾಕ್ಟರ್

ಗಳೂ ಸಹ ವಿಶೇಷವಾಗಿ ಆಸಕ್ತಿಯನ್ನು ವಹಿಸಿ ವೈದ್ಯಕೀಯ ಸೌಲಭ್ಯವನ್ನು ನೀಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಇದು ಒಂದು ಬಹಳ ಕಠಿಣವಾದ ವಿಷಯ ಸ್ಥಿತಿ ಆಲ್ಲಿ ಕಾಣಿಸ್ತಿದ್ದೇವೆ, ಏತಕ್ಕೆಂದರೆ ಡಾಕ್ಟರ್‌ಗಳ ಅಭಿಪ್ರಾಯದ ಪ್ರಕಾರ ಕೂಡಿದಂಥವರೆಲ್ಲರಿಗೂ ಸಪ ಲೀವರ್, ಕಿಡ್ನಿ ಮತ್ತು ಬ್ರೈನ್‌ಗೆ ಇದು ಕೂಡಲೇ ಎಫೆಕ್ಟ್ ಆಗುತ್ತದೆಂದು ಹೇಳಿದ್ದಾರೆ ಆದುದರಿಂದ ಇಂಥಾ ಒಂದು ಹೃದಯ ವಿದ್ರಾವಕ ಘಟನೆಯಲ್ಲಿ ಸರ್ಕಾರ ಏನೂ ಮಾಡುವುದಕ್ಕೆ ಬರುವುದಿಲ್ಲ. ಆದರೆ ಅವರಿಗೆ ಸಹಾಯವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅಲ್ಲಿ ಕೆಲವರಿಗೆ ಶವಸಂಸ್ಕಾರ ಮಾಡಲು ಯಾರು ಇಲ್ಲ. ಅಂಥವರಿಗೆ ಸರ್ಕಾರವೇ ಏರ್ಪಾಡು ಮಾಡುತ್ತಿದೆ. ಹೀಗೆ ಒಟ್ಟಾರೆ ಚಿತ್ರ ಬಹಳ ದುಃಖಕರವಾಗಿದೆ ಆದುದರಿಂದ ಇದರ ಬಗ್ಗೆ ಒಂದು ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ವಿಚಾರಣೆಯನ್ನು ಮಾಡಲು ಸರ್ಕಾರ ಆಜ್ಞೆ ಮಾಡಿದೆ. ಇದಕ್ಕಾಗಿ ನಾವು ಮುಖ್ಯ ನ್ಯಾಯಾಧೀಶರ ಸಂಪರ್ಕವನ್ನು ಬೆಳೆಸಿ ಕೂಡಲೇ ನ್ಯಾಯಾಧೀಶರನ್ನು ನೇಮಿಸುವ ಬಗ್ಗೆ ತಿಳಿಸಿದ್ದೇವೆ. ಈ ಒಂದು ಘಟನೆ ನಡೆಯುವುದಕ್ಕೆ ಕಾರಣವೇನು ? ಇಷ್ಟೊಂದು ವಿಷಮ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣರ್ತ್ಯರು ಎಂದು ಹೇಳುವುದರ ಬಗ್ಗೆ ಮತ್ತು ಇನ್ನು ಅನೇಕ ವಿಚಾರಗಳ ಬಗ್ಗೆ ಮತ್ತು ಇದರಲ್ಲಿ ಯಾರ ಕೈವಾಡವಿದೆ, ಇಲ್ಲವೆಂದು ಯಾವುದೂ ಹೇಳುವುದಕ್ಕೆ ಗೊತ್ತಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಪೂರ್ತಿ ಗೊತ್ತಾಗಬೇಕಾದರೆ ಒಬ್ಬ ನ್ಯಾಯಾಧೀಶರಿಂದ ನ್ಯಾಯಾಂಗ ವಿಚಾರಣೆಯಾದರೆ ಸೂಕ್ತ ವೆಂದು ಹೇಳಿ ಸರ್ಕಾರ ಈ ಒಂದು ಅಭಿಪ್ರಾಯಕ್ಕೆ ಬಂದು ಇದರ ವಿಚಾರಣೆ ಶ್ರೇಷ್ಠ ನ್ಯಾಯಾಧೀಶರಿಂದ ಆಗಬೇಕೆಂದು ಮಾನ್ಯ ಮುಖ್ಯ ನ್ಯಾಯಾಧೀಶರವರಿಗೆ ತಿಳಿಸಿದ್ದೇವೆ. ಆದಂದರಿಂದ ಈ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆ ಕೂಡ ಆಗುತ್ತದೆ, ಅನಂತರ ಏನು ವರದಿ ಬರುತ್ತದೆಯೋ ಆದರ ಆಧಾರದ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬಹುದು. ಹಾಗೆಯೇ ಇಂಥಾ ಒಂದು ದುಃಖಕರವಾದ ಸನ್ನಿವೇಶದಲ್ಲಿ ಇವತ್ತು ನಾವು ಈ ಸಭೆಯನ್ನು ನಡೆಸುವುದು ಸೂಕ್ತವಲ್ಲವೆಂದು ಅನ್ನಿಸುತ್ತದೆ. ಏತಕ್ಕೆಂದರೆ ಅಲ್ಲಿ ನಿಧನ ಹೊಂದಿರತಕ್ಕವರಲ್ಲಿ ಅತ್ಯಂತ ಬಡವರು, ಕೂಲಿಗಾರರು, ದುರ್ಬಲವರ್ಗಕ್ಕೆ ಸೇರಿದವರೇ ಆಗಿದ್ದು ಅದರಲ್ಲೂ ಕೆಲವು ಮಹಿಳೆಯರು ಮತ್ತು ಮಕ್ಕಳು ಇರುವುದರಿಂದ ಇಂಥಾ ದುಃಖಕರವಾದ ಸನ್ನಿವೇಶದಲ್ಲಿ ನಾವುಗಳು ಸಹ ಭಾಗವಹಿಸಿ ಈ ದಿನದ ಶಾಸನಸಭೆಯ ಕಾರ್ಯಕಲಾಪಗಳನ್ನು ಮುಂದೂಡಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು, ನಾವು ಇವತ್ತೇ ಸತ್ತವರ ಆತ್ಮಕ್ಕೆ ಶಾಂತಿಯನ್ನು ಕೋರುವ ಅವಶ್ಯಕತೆ ಇಲ್ಲ ಏತಕ್ಕೆಂದರೆ ಇಲ್ಲಿಯವರೆಗೆ ೧೯೫ ಜನ ಸತ್ತಿದ್ದಾರೆ ನಾನು ಈ ಹೇಳಿಕೆಯನ್ನು ಮಾಡಿ ಮುಗಿಸುವುದರೊಳಗಾಗಿ ಇನ್ನು ಎಷ್ಟು ಜನ ಸತ್ತು ಹೋಗಿರುತ್ತಾರೊ ಗೊತ್ತಿಲ್ಲ, ಆದುದರಿಂದ ನಾಳೆ ಸಭೆ ಸೇರುವಷ್ಟು ಹೊತ್ತಿಗೆ ಅಂತಿಮವಾಗಿ ಎಷ್ಟು ಜನ ತೀರಿ ಹೋಗಿದ್ದಾರೆ ಎಂಬುದು ತಿಳಿದ ಮೇಲೆ ಸಂತಾಪ ಸೂಚನೆಯನ್ನು ಮುಂಡಿಸಬಹುದಾಗಿದೆ ಇಂಥಾ ವಾತಾವರಣದಲ್ಲಿ ಇವತ್ತಿನ ಸಭೆಯನ್ನು ನಡೆಸುವುದಕ್ಕೆ ಯಾರ ಮನಸ್ಸಿಗೂ ಆಷ್ಟೊಂದು ಸಂತೋಷವಿಲ್ಲ. ಆದುದರಿಂದ ಈ ಸಭೆಯು ಈ ದಿನದ ಕಾರ್ಯಕಲಾಪಗಳನ್ನೆಲ್ಲಾ ಮುಂದೂಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲಿಯವರೆಗೆ ನಿಧನ ಹೊಂದಿರತಕ್ಕ ಕುಟುಂಬದವರಿಗೆ ಸಹಾಯ ಮಾಡಲು ಸರ್ವ ಪ್ರಯತ್ನ ಮಾಡುತ್ತೇನೆಂದು ಈ ಸಭೆಗೆ ಆಶ್ವಾಸನೆ ಕೊಡುತ್ತಾ, ಸತ್ತಂಥ ಕುಟುಂಬದವರ ದುಃಖದಲ್ಲಿ ಈ ಸದನ ಸಹ ಪಾಲ್ಗೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ (ಬಿನ್ನಿಪೇಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರೇ, ಇವತ್ತು ಬೆಂಗಳೂರು ನಗರದಲ್ಲಿ ನಡೆದಂಥ ಘಟನೆ ಮುಂದೆ ಇದು ಬೆಂಗಳೂರು ಹುಟ್ಟಿದಾಗಿನಿಂದಲೂ ಇಂಥಾ ದುರ್ಘಟನೆ ನಡೆದಿರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು ನನಗೆ ಈ ವಿಚಾರ ಗೊತ್ತಾದ ಕೂಡಲೆ ಬೆಂಗಳೂರು ನಗರದಲ್ಲಿ ಎಲ್ಲೆಲ್ಲಿ ಇಂಥಾ ಒಂದು ದುರ್ಘಟನೆ ನಡೆದಿದೆ ಆ ಎಲ್ಲಾ ಪ್ರದೇಶಗಳಿಗೂ ಹೋಗುವುದಕ್ಕೆ ಸಾಧ್ಯವಾಗದೇ ಹೋದರೂ ಸಹ ಸುಮಾರು ಅರ್ಧ ಪ್ರದೇಶಗಳನ್ನು ನೋಡಿಕೊಂಡು ಬಂದಿದ್ದೇನೆ. ನಾನು ಆದನ್ನೆಲ್ಲಾ ಹೇಳಬೇಕೆಂದಿದ್ದೆ ಆದರೆ ಮಾನ್ಯ ಮುಖ್ಯ ಮಂತ್ರಿಗಳವರೇ ಎಲ್ಲವನ್ನೂ ವಿಶದಪಡಿಸಿ ಹೇಳಿದ್ದಾರೆ. ಆದುದರಿಂದ ನಾನು ಇದರ ಬಗ್ಗೆ ಇನ್ನು ಹೆಚ್ಚಿಗೆ ಹೇಳತಕ್ಕಂಥ ಅವಶ್ಯಕತೆ ಇಲ್ಲ. ನಾನು ಮನವಿ ಮಾಡಿಕೊಳ್ಳುವುದಿಷ್ಟೆ. ಕಳ್ಳಭಟ್ಟಿ ಸರಾಯಿ ಬೆಂಗಳೂರು ನಗರದಲ್ಲಿ ಮಾತ್ರವಲ್ಲ ಕರ್ನಾಟಕ ಎಲ್ಲಾ ಭಾಗದಲ್ಲೂ ವ್ಯಾಪಕವಾಗಿರುವುದರಿಂದ ಇದನ್ನು ತಡೆಗಟ್ಟುತಕ್ಕ ಪ್ರಯತ್ನ ಮಾಡ ಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ಕಳ್ಳಭಟ್ಟಿ ಸರಾಯಿಯಿಂದ ಜನ ಸಾಯುತ್ತಿದ್ದಾರೆಂದು ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಕಳ್ಳಭಟ್ಟಿ ಸರಾಯಿಯಲ್ಲಿ ಯಾವುದೊಂದು ಒಂದು

ತರಹದ ವಿಷ ಮಿಶ್ರವಾಗಿರುವುದರಿಂದ ಜನ ಸತ್ತಿದ್ದಾರೆ. ಅವರು ಕಳ್ಳಭಟ್ಟಿ ಸರಾಯಿಯನ್ನು ಕುಡಿದು ಸತ್ತಿಲ್ಲ. ಆದುದರಿಂದ ಈ ವಿಷ ಹೇಗೆ ಮಿಶ್ರವಾಯಿತು ಎನ್ನುವುದನ್ನು ವಿಚಾರ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ವಿಚಾರಣಾ ಸಮಿತಿಯನ್ನು ಮಾಡಿದ ಮೇಲೆ ಅದರಲ್ಲಿ ಯಾವರೀತಿ ಆಯಿತು, ಹೇಗೆ ಆಯಿತು ಎಂಬುದನ್ನೆಲ್ಲ ವಿಚಾರಿಸುವ ಷರತ್ತುಗಳನ್ನು ಎಲ್ಲಿ ಸೇರಿಸುತ್ತಾರೆಂದು ನಾನಾದರೂ ನಂಬಿದ್ದೇನೆ. ಇಲ್ಲಿ ಪ್ರಮುಖವಾಗಿರತಕ್ಕ ವಿಚಾರವೆಂದರೆ ಅನಾಥವಾಗಿರತಕ್ಕ ಮಕ್ಕಳ ಸಮಸ್ಯೆ, ಆ ಮಕ್ಕಳ ತಂದೆ ತಾಯಿಗಳು ತೀರಿಕೊಂಡಿದ್ದು ಅವ ದಿಕ್ಕಿಲ್ಲದೆ ಮನೆಗಳಲ್ಲಿವೆ. ಅವುಗಳ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳತಕ್ಕ ವ್ಯವಸ್ಥೆ ಆಗಬೇಕು. ಅವುಗಳಿಗೆ ನೀರು, ಊಟ ಕೊಡುವವರು ಯಾರು ಇಲ್ಲ. ಅಕ್ಕಪಕ್ಕದ ಮನೆಯವರು ಒಂದೆರಡು ದಿನ ಕೊಡಬಹುದು. ಆದುದರಿಂದ, ಸಮಾಜ ಕಲ್ಯಾಣ ಇಲಾಖೆಯಾಗಲೀ, ಕಾರ್ಪೊರೇಷನ್ ಆಗಲೀ ಅಥವಾ ಬೇರೆ ಸೇವೆ ಮಾಡತಕ್ಕ ಸಂಸ್ಥೆಗಳಾಗಲೀ ಆ ಮಕ್ಕಳನ್ನು ತೆಗೆದುಕೊಂಡು ಸಾಕದೇ ಹೋದರೆ ನಿಜವಾಗಿಯೂ ನಾವು ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆಂದು ನನಗಾದರೂ ವ್ಯಸನವಾಗುತ್ತಿದೆ. ಅನಾಥ ಮಕ್ಕಳಿಗೆ ಒಂದು ವ್ಯವಸ್ಥೆ ಮಾಡುವುದರ ಜೊತೆಗೆ ಕುಟುಂಬದಲ್ಲಿ ಸತ್ತವರನ್ನೇ ನಂಬಿಕೊಂಡಿದ್ದಂತಹ ವ್ಯಕ್ತಿಗಳಿಗೆ ಕೆಲಸದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಏನು ಆಶ್ವಾಸನೆ ಕೊಟ್ಟಿದ್ದಾರೆ ಅವು ಒಂದೂ ತಪ್ಪದಂತೆ ನಿರವೇರಿಸಿಕೊಡಬೇಕೆಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಪರಪ್ಪ ಕಳ್ಳಿಗುಡ್ಡ.—ಇವತ್ತಿನ ದಿವಸ ಭಟ್ಟಿ ಸರಾಯಿ ಎಂಬುದು ಬ್ಯಾರಲ್‌ಗಳಲ್ಲಿ ಬರುತ್ತಿದೆ. ಕೇರಳದಿಂದ, ಆಂಧ್ರದಿಂದ ಸೀಮೆ ಎಣ್ಣೆ ಬಂದಹಾಗೆ ಬರುತ್ತದೆ. ನಮ್ಮ ಆಫೀಸರ್ ಕೃಷ್ಣ ಪ್ರಾಜೆಕ್ಟ್ ಏರಿಯಾದ ಆಜುಬಾಜು ಅಂಗಡಿಗಳಲ್ಲಿ ಮಾರಾಟ ಮಾಡುತ್ತಾರೆ. ಅಲ್ಲಿ ಕೆಲಸ ಮಾಡತಕ್ಕ ಬಡವರು ಅದನ್ನು ಕುಡಿದು ಸಾಯುತ್ತಾರೆ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಯವರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಇಂಥ ಒಂದು ದುರ್ಘಟನೆ ಈ ದೇಶದಲ್ಲಿ ಹಿಂದೆ ಎಂದೂ ನಡೆದಿರಲಿಲ್ಲ. ತತ್ಪರಿಣಾಮವಾಗಿ ಬಹಳ ಜನ ಅಸು ನೀಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರುವ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಯವರು ಪ್ರಸ್ತಾಪಿಸಿದ್ದಾರೆ. ದಕ್ಕೆ ನಾನೂ ಕೂಡ ನನ್ನ ದುಃಖವನ್ನು ವ್ಯಕ್ತ ಮಾಡುತ್ತಾ, ಸತ್ತವರ ಆತ್ಮಕ್ಕೆ ಶಾಂತಿ ಕೋರುತ್ತಾ, ಇವತ್ತಿನ ಕಾರ್ಯ ಕಲಾಪಗಳನ್ನು ಇಲ್ಲಿಗೇ ಮುಗಿಸಿ ಸಭೆ ನಾಳೆ ಮಧ್ಯಾಹ್ನ ೧೨ ಗಂಟೆಗೆ ಸೇರುತ್ತದೆ.

The House adjourned at Twenty two Minutes past Twelve of the Clock to meet again at Twelve of the Clock on Thursday the 9th July 1981.